ಶ್ರೀ ಎ. ಭೀಮಪ್ಪ ನಾಯಕ್.—ಅಲ್ಲಿಗೆ ಹತ್ತು ಹನ್ನೆರಡು ಮೈಲಿಯಲ್ಲಿ ರಾಂಪುರವಿದೆ. ಅದು ಮೈಸೂರು ಸಂಸ್ಥಾನದ ಗಡಿಯ ಕೊನೆಯಲ್ಲಿದೆ. ಅಲ್ಲಿ ಬೇಕಾದಷ್ಟು ಬಾವಿಗಳಿರುವುದರಿಂದ ಅಲ್ಲಿಗೆ ತಕ್ಷಣ ವಿದ್ಯುಚ್ಛಕ್ತಿ ಕೊಡಲಾಗುತ್ತದೆಯೇ ?

Sri T. SIDDALINGAIYA.—It will be considered.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ವೇದಾವತಿ ವ್ಯಾಲಿಗೆ ತಕ್ಷಣ ಕೊಡದೇ ಹೋದರೆ ಸಾವಿರಾರು ಎಕರೆ ಬತ್ತದ ಫಸಲು, ಮುಕ್ಕಾಲು ಪಾಲು ಹೋಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಬಂದಿಲ್ಲ.

ಶ್ರೀ ವಿ. ಮಸಿಯಪ್ಪ.—ಈ ವರ್ಷ ವಾಣೀ ವಿಲಾಸ ಸಾಗರದಲ್ಲಿ ಬಹಳ ಕಡಮೆ ನೀರು ಬಂದಿದೆಯೆಂಬುದು ಗೊತ್ತಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಎಷ್ಟು ನೀರು ಬಂದಿದೆ ಎನ್ನುವುದು ಗೊತ್ತಿಲ್ಲ.

ಶ್ರೀ ವಿ. ಮಸಿಯಪ್ಪ.—ಚಳ್ಳಕೆರೆಯಿಂದ ಪರಶುರಾಮಪುರದ ಕೆರೆಯವರೆಗೆ ಹಾಕಿರತಕ್ಕ ಲೈನನ್ನು ಮುಂದುವರಿಸಿ ಹಿರಿಯೂರು ತಾಲ್ಲೂಕಿನಗ್ರಾಮಗಳಿಗೆ ಕೊಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯ.—ಇದು ಎರಡನೆಯ ಅಂದಾಜಿನಲ್ಲಿದೆ.

ಶ್ರೀ ವಿ. ಮಸಿಯಪ್ಪ.—ಇದು ವಾಣಿ ವಿಲಾಸ ಸಾಗರ, ಹಿರಿಯೂರು ತಾಲ್ಲೂಕು.....

Sri T. SIDDALINGAIYA.—You have got it there. In Hiriyur Taluk there are two estimates pertaining to that; it will come under one of them.

ಶ್ರೀ ವಿ. ಮಸಿಯಪ್ಪ.—ಧರ್ಮಪುರ ಹೋಬಳಿಯಲ್ಲಿ ಸುಮಾರು ಒಂದುವರೆ ಸಾವಿರಕ್ಕಿಂತ ಹೆಚ್ಚು ಬಾವಿಗಳಿವೆ ಎಂಬುದು ಗೊತ್ತಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಇರಬಹುದು.

ಶ್ರೀ ವಿ. ಮಸಿಯಪ್ಪ.—ಅವರೆಲ್ಲರೂ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಒತ್ತಾಯ ಪಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಇರಬಹುದು, ಅದನ್ನೆಲ್ಲಾ ಒಪ್ಪಿಕೊಳ್ಳುತ್ತೇನೆ.

ಶ್ರೀ ವಿ. ಮಸಿಯಪ್ಪ.—ಆ ಹೋಬಳಿಯಲ್ಲಿ ನೀರಾವರಿಗೆ ಉಪಯುಕ್ತವಾಗತಕ್ಕ ಯಾವ ಕೆರೆಗಳ ಸೌಲಭ್ಯವೂ ಇಲ್ಲವೆಂಬುದು ಗೊತ್ತಿದೆಯೇ ?

Sri T. SIDDALINGAIYA.—You are referring to all your difficulties.

ಶ್ರೀ ವಿ. ಮಸಿಯಪ್ಪ.—ಈಗ ಕೇಂದ್ರ ಸರ್ಕಾರದಿಂದ ಒದಗಿರತಕ್ಕ ಗ್ರಾಂಟಿನಲ್ಲಿ ಈ ಅಂದಾಜುಗಳನ್ನು ಮುಂಜೂರುಮಾಡಿ ಅಲ್ಲಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೀರೆಂಬ ಭರವಸೆಯಿಟ್ಟುಕೊಳ್ಳಬಹುದೆ ?

Sri T. SIDDALINGAIYA.—Subject to the necessities the case of every place will be considered. I think we may get 30 lakhs of rupees. Preference will be given to distress areas. Your district will also be one of them.

Supply of Electricity to villages of Mulbagal Taluk.

Q.—120. Sri G. NARAYANA GOWDA (Mulbagal-Srinivaspur).—

Will the Government be pleased to state :—

(*a*) the names of villages in Mulbagal Taluk for which supply of electricity has been asked ;

(*b*) the steps that have taken regarding the above ?

A.—Sri T. SIDDALINGAIYA (Minister for Industries).—

(*a*) Mulbagal Taluk.—

1. Hebbani and Byrakur.
2. Thambihalli.
3. Urukunte and Mittur.
4. Dollapalli.
5. Yemmanatha.
6. Balla.
7. Padmaghatta, Thatikal, Nangli and Mustur.
8. Mudeganur, Thathanur, Gujjanahalli and Agara.
9. Madivala.

(*b*) 1. Hebbani and Byrakur.—
An estimate for Rs. 1,77,000 for electrification is deferred for want of funds and low return.

2. Thambihalli.—
An estimate for Rs. 36,120 is prepared but is kept pending for want of grants.

3. Urukunte and Mittur.—
An estimate for Rs. 33,220 is prepared and the same is kept pending due to poor returns.

4. Dollapalli.—
An estimate for Rs. 5,000 is prepared and the same is under scrutiny.

5. Yemmanatha.—
An estimate for Rs. 10,853 has been prepared and the Deputy Commissioner, Kolar, has been addressed to investigate if revenue return could be improved.

6. Balla Village.—
An estimate for Rs. 19,500 has been deferred for low return.

7. Padmaghatta, Thatikal, Nangli and Mustur.—
As estimate for Rs. 18,400 has been deferred for low return.

8. Mudeganur, Thathanur, Gujjanahalli and Agara.—
An estimate for the electrification of these villages at a cost of Rs. 2,23,000 was prepared but the same has been deferred due to low returns.

9. Madivala.—
An estimate for power supply to 4 I.P. sets in this place has been prepared and this will be sanctioned during this year.

ಶ್ರೀ ಜಿ. ನಾರಾಯಣಗೌಡ.—ಉತ್ತರದ (ಬಿ) ಭಾಗದ ಐಟಂ ಒಂದರಲ್ಲಿ, ಹೆಬ್ಬಣಿ ಮತ್ತು ಬೈರಕೂರು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ತಯಾರಿಸಲಾಗಿದ್ದ ಒಂದು ಲಕ್ಷ 77 ಸಾವಿರ ರೂಪಾಯಿಗಳ ಅಂದಾಜನ್ನು ಮುಂದಕ್ಕೆ ಹಾಕಲಾಗಿದೆ ಎಂದು ಹೇಳಿದ್ದೀರಿ. ಆ ಅಂದಾಜನ್ನು ತಾವು ಯಾವಾಗ ಸ್ವಾಮಿ, ತಯಾರಿಸಿದ್ದು ?

*ಶ್ರೀ ಟಿ. ಸಿದ್ದಲಿಂಗಯ್ಯ.—ಅಂದಾಜೇನೋ ಆಗಿದೆ. ಆದರೆ ಯಾವ ತಾರೀಖಿನಲ್ಲಿ ಅದನ್ನು ತಯಾರಿಸಲಾಯಿತೆಂಬುದನ್ನು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜಿ. ನಾರಾಯಣಗೌಡ.—ಬೈರಕೂರಿಗೂ ವಿದ್ಯುಚ್ಛಕ್ತಿಯನ್ನೊದಗಿಸಲು ಅಂದಾಜು ತಯಾರಾಗಿತ್ತೆ ?

ಶ್ರೀ ಟಿ. ಸಿದ್ದಲಿಂಗಯ್ಯ.—ಇದೂ ಸಹ ಅದರಲ್ಲೇ ಸೇರಿರಬಹುದೆಂಬ ನಂಬಿಕೆ ನನಗೆ ಇದೆ.

ಶ್ರೀ ಜಿ. ನಾರಾಯಣಗೌಡ.—ಈ ತರಹವಾದ ಯಾವ ಅನುಕೂಲಗಳನ್ನು ಅಲ್ಲಿಗೆ ಕಲ್ಪಿಸಿಕೊಡದಿರುವ ಕಾರಣದಿಂದ ಆ ಪ್ರಾಂತದಲ್ಲಿ ಅನೇಕ ಗ್ರಾಮಗಳು ಬಹಳ ಹೀನಸ್ಥಿತಿಗೆ ಬಂದಿರುತ್ತವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅನೇಕ ವಿಚಾರಗಳು ನನ್ನ ಗಮನಕ್ಕೆ ಬಂದಿವೆ.

ಶ್ರೀ ಜಿ. ನಾರಾಯಣಗೌಡ.—ಈ ತೊಂದರೆಗಳನ್ನೆಲ್ಲಾ ತಾವು ಗಮನಕ್ಕೆ ತೆಗೆದುಕೊಂಡು ಅಲ್ಲಿಗೆ ತಕ್ಷಣ ವಿದ್ಯುಚ್ಛಕ್ತಿ ಸರಬರಾಯಿಯಾಗುವಂತೆ ಮಾಡುತ್ತೀರಾ ?

Sri T. SIDDALINGAIYA.—Yes, Sir. I quite agree with him.

ಶ್ರೀ ಜಿ. ನಾರಾಯಣಗೌಡ.—ಹಾಗಾದರೆ ಬೇಗ ಕೆಲಸವನ್ನು ಪ್ರಾರಂಭಮಾಡುತ್ತೀರಾ ?

Sri T. SIDDALINGAIYA.—I have already answered.

ಶ್ರೀ ಜಿ. ನಾರಾಯಣಗೌಡ.—ಇನ್ನುಳಿದ ಸ್ಥಳಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡಲು ಕೇವಲ 5-6 ಸಾವಿರ ರೂಪಾಯಿಗಳಾದರೆ ಸಾಕಾಗುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

Sri T. SIDDALINGAIYA.—ಅದನು. ರಿಟನ್ ಆನ್‌ಸರ್‌ನಲ್ಲೇ ಕೊಡಲಾಗಿದ್ದೆ. Estimate for 5,000 rupees is prepared and the same is under scrutiny and another estimate for 18,000 rupees has been deferred. ಆದರೆ ಪ್ರಕೃತ ಸಂದರ್ಭದಲ್ಲಿ ಇಡೀ ಫೈಲುಗಳನ್ನೆಲ್ಲಾ ತಿಳಿಸತಕ್ಕದು ಅನಾವಶ್ಯಕ.

ಶ್ರೀ ಜಿ. ನಾರಾಯಣಗೌಡ.—ತಂಬಿಹಳ್ಳಿಗೆ 36 ಸಾವಿರ ರೂಪಾಯಿಗಳು ಬೇಕಾಗುತ್ತದೆಯೇ ?

Sri T. SIDDALINGAIYA.—An estimate for Rs. 36,120 is prepared but is kept pending for want of grants.

ಶ್ರೀ ಜಿ. ನಾರಾಯಣಗೌಡ.—ಇಲ್ಲಿಗೆ ಬೇಗ ವಿದ್ಯುಚ್ಛಕ್ತಿ ಹಾಕಲು ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯ.—ಆಗಲಿ.

Rural Electrification in Malavalli Taluk.

Q.—229. Sri B. P. NAGARAJA MURTHY (Malavalli).—

Will the Government be pleased to state :—

(*a*) the number of applications received by them from Malvalli Taluk for rural electrification ;

(*b*) how many of the estimates are sanctioned and which are those ;

(*c*) the number of estimates that are pending and which are those ;

(*d*) in how many cases the estimates are prepared ;

(*e*) the number of sanctioned estimates that are under working ?

A.—Sri T. SIDDALINGAIYA (Minister for Industries).—

(*a*) 11.

(*b*) Only one for the electrification of Ragibommanahally, cost Rs. 29,550.

(*c*) Two ; Electrification of Annur and Uppanahally Villages.

(*d*) In all cases, except two (Kundur and Thalagavadi) estimates have been prepared.

(*c*) One is sanctioned. Ragibommanahally work is completed and the place electrified.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ಅರ್ಜಿಗಳು ಬಂದು ಎಷ್ಟು ವರ್ಷಗಳಾಗಿವೆ, ಸ್ವಾಮಿ?

*ಶ್ರೀ ಟಿ. ಸಿದ್ದಲಿಂಗಯ್ಯ.—ನಿಖರವಾದ ತಾರೀಖನ್ನು ಹೇಳುವುದಕ್ಕಾಗುವುದಿಲ್ಲ, ಮತ್ತು ಹೇಳುವ ಆವಶ್ಯಕತೆ ಇದ್ದಂತೆಯೂ ಕಂಡು ಬರುತ್ತಿಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಂದಾಜು ತಯಾರಾಗಿ ಎಷ್ಟು ವರ್ಷಗಳಾಯಿತು?

ಶ್ರೀ ಟಿ. ಸಿದ್ದಲಿಂಗಯ್ಯ.—ಅದರಲ್ಲಿ ಅನೇಕ ವಿಚಾರಗಳು ಬಂದಿವೆ. ಆದರೆ ತಾರೀಖನ್ನು ಹೇಳಲು ಈಗ ಸಾಧ್ಯವಿಲ್ಲ. There are thousands of applications and estimates will be made and they are pending for 20 years, some of them are pending for over 20 years.

Sri B. P. NAGARAJA MURTHY.—I am only referring to Malavalli Taluk.

Sri T. SIDDALINGAIYA.—I think it was estimated some years back.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ತಾವು ಇಲ್ಲಿ ಕೊಟ್ಟಿರತಕ್ಕ (ಸಿ) ಭಾಗದ ಉತ್ತರದಲ್ಲಿ 2 ಅರ್ಜಿಗಳು ಮಾತ್ರ ಮಂಜೂರಾಗದೆ ಉಳಿದಿರುತ್ತವೆಂದು ಒಂದು ಕಡೆ ತಿಳಿಸಿ ಪುನಃ (ಡಿ) ಭಾಗದ ಉತ್ತರದಲ್ಲಿ ಈ ಎರಡು ಹೊರತು ಬಾಕಿ ಅಂದಾಜುಗಳೆಲ್ಲಾ ಮಂಜೂರಾಗಿರುತ್ತವೆಂದು ತಿಳಿಸಿರುವುದರಿಂದ ಈ ಎರಡರಲ್ಲಿ ಯಾವುದು ನಿಜ?

ಶ್ರೀ ಟಿ. ಸಿದ್ದಲಿಂಗಯ್ಯ.—ಯಾವ ಯಾವ ಅಂದಾಜುಗಳನ್ನು ತಯಾರಿಸಲಾಗಿದೆ ಮತ್ತು ಯಾವ ಯಾವುದನ್ನು ಮಂಜೂರು ಮಾಡಲಾಗಿದೆ ಎಂಬುದನ್ನೆಲ್ಲಾ ಉತ್ತರದಲ್ಲೇ ವಿವರವಾಗಿ ತಿಳಿಸಲಾಗಿದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅವುಗಳ ಹೆಸರನ್ನು ತಿಳಿಸಲಾಗುತ್ತದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯ.—ಎರಡು ಬಿಟ್ಟು ಬಾಕಿ ಅಂದಾಜುಗಳನ್ನೆಲ್ಲಾ ಮಂಜೂರು ಮಾಡಲಾಗಿದೆಯೆಂದು ಹೇಳಿದ್ದೇನೆ.

Mr. SPEAKER.—It is answered in (*e*) that one is sanctioned.

ಶ್ರೀ ಟಿ. ಸಿದ್ದಲಿಂಗಯ್ಯ.—ಒಂದು ಸ್ಯಾಂಕ್ಷನ್ ಆಗಿದೆಯೆಂದೂ, ಎರಡರ ಅಂದಾಜು ಮಂಜೂರಾಗಿದೆಯೆಂದೂ ತಿಳಿಸಿದ್ದೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹಾಗಾದರೆ ಅಂದಾಜು ಕಂಪ್ಲೀಟ್ ಆಗಿರುವುದೆಷ್ಟು?

ಶ್ರೀ ಟಿ. ಸಿದ್ದಲಿಂಗಯ್ಯ.—ತಾವು ದಯವಿಟ್ಟು (ಡಿ) ಭಾಗಕ್ಕೆ ಒದಗಿಸಿರುವ ಉತ್ತರವನ್ನು ನೋಡಿ.